# ಸೈಬರ್ ಸೆಕ್ಯುರಿಟಿಯಲ್ಲಿ ಸರ್ಟಿಫೈಡ್ ಪ್ರೋಗ್ರಾಂ

ಬೆಂಗಳೂರು: ಸೈಬರ್ ಸೆಕ್ಯೂರಿಟಿ ಜಗತ್ತಿನಾದ್ಯಂತ ಪ್ರಸಿದ್ಧ ವ್ಯಕ್ತಿಗಳು, ಕಾರ್ಪೊರೇಟ್‌ಗಳು ಮತ್ತು ಸರ್ಕಾರಗಳು ಇತ್ತೀಚಿನ ದಿನಗಳಲ್ಲಿ ಎದುರಿಸುತ್ತಿರುವ ಸಾಮಾನ್ಯ ಸವಾಲಾಗಿದೆ. ಎಲ್ಲಾ ಹಂತಗಳಲ್ಲಿ ಅದನ್ನು ನಿಭಾಯಿಸಲು ನುರಿತ ಜನರ ಕೊರತೆ ಇರುವುದರಿಂದ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದೆ. ಇಂಟರ್ನ್ಯಾಷನಲ್ ಇನ್ಫಾರ್ಮೇಶನ್ ಸಿಸ್ಟಮ್ ಸೆಕ್ಯುರಿಟಿ ಸರ್ಟಿಫಿಕೇಶನ್ ಕನ್ಸೋರ್ಟಿಯಂ ನಡೆಸಿದ ಸಂಶೋಧನೆಯ ಪ್ರಕಾರ, ಜಾಗತಿಕವಾಗಿ ಪ್ರಸ್ತುತ ಸುಮಾರು 3 ಮಿಲಿಯನ್ ಸೈಬರ್ ಸೆಕ್ಯುರಿಟಿ ವೃತ್ತಿಪರರ ಕೊರತೆಯಿದೆ.

ಉದ್ಯೋಗ ಮಾರುಕಟ್ಟೆಯಲ್ಲಿನ ಕೌಶಲ್ಯ-ಅಂತರವನ್ನು ಕಡಿಮೆ ಮಾಡಲು, ಬೆಂಗಳೂರು ಮೂಲದ ಪ್ರಮುಖ ಭಾರತೀಯ-ಬಹುರಾಷ್ಟ್ರೀಯ ಸೈಬರ್ ಸೆಕ್ಯುರಿಟಿ ಉತ್ಪನ್ನಗಳು ಮತ್ತು ಸೇವೆಗಳ ಸಂಸ್ಥೆಯಾದ SecurEyes, ಆನ್ಲೈನ್ ಕೌಶಲ್ಯ ಅಭಿವೃದ್ಧಿ ಕೋರ್ಸ್ ಸೆಕ್ಯೂರ್‌ಐಸ್ ಸೈಬರ್‌ಸೆಕ್ಯುರಿಟಿ ಸರ್ಟಿಫೈಡ್ ಪ್ರೋಗ್ರಾಂ ಅನ್ನು ನಡೆಸುತ್ತಿದೆ. ಇದರ 7ನೆಯ ಆವೃತ್ತಿಗೆ ಸೇರ್ಪಡೆ ಇದೀಗ ಪ್ರಾರಂಭವಾಗಿದೆ. ಸೈಬರ್ ಸೆಕ್ಯುರಿಟಿಯ ಬಗ್ಗೆ ಆಸಕ್ತಿ ಹೊಂದಿರುವ ಮತ್ತು ತಮ್ಮ ಪದವಿಯನ್ನು ಪೂರ್ಣಗೊಳಿಸಿದ ಅಥವಾ ಅಂತಿಮ ವರ್ಷದ/ಸೆಮಿಸ್ಟರ್‌ನಲ್ಲಿರುವ ಅಭ್ಯರ್ಥಿಗಳು ಈ ಕೋರ್ಸ್ ಗೆ ಅರ್ಜಿ ಸಲ್ಲಿಸಬಹುದು. ತರಗತಿಯ ಅವಧಿ ಮುಗಿದ ನಂತರ ವಿದ್ಯಾರ್ಥಿಗಳು ಲೈವ್ ಪ್ರಾಜೆಕ್ಟ್‌ಗಳಲ್ಲಿ 6-ತಿಂಗಳ ಕೆಲಸದ ತರಬೇತಿಯನ್ನು ಪಡೆಯುತ್ತಾರೆ.

SecurEyes ಕುರಿತು ಇನ್ನಷ್ಟು ತಿಳಿದುಕೊಳ್ಳಲು https://secureyes.net/ ಗೆ ಭೇಟಿ ನೀಡಿ.